# 13

# ನೀತಿವಂತರ ಬಹುಮಾನ

*“ನಮ್ಮ ಕರ್ತನಾದ ಯೇಸುಕ್ರಿಸ್ತನ ತಂದೆಯೂ ದೇವರೂ ಆಗಿರುವಾತನಿಗೆ ಸ್ತೋತ್ರವಾಗಲಿ. ಆತನು ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ತನ್ನ ಮಹಾ ಕರುಣಾನುಸಾರವಾಗಿ ನಮ್ಮನ್ನು ತಿರಿಗಿ ಜೀವಿಸುವಂತೆ - ಮಾಡಿ ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿ ನಮ್ಮನ್ನು ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆಯನ್ನು ಎದುರು ನೋಡುವವರನ್ನಾಗಿ ಮಾಡಿದನು. ಆ ಬಾಧ್ಯತೆಯು ನಿಮಗೋಸ್ಕರ ಪರಲೋಕ ದಲ್ಲಿ ಇಟ್ಟಿರುವುದು” (1 ಪೇತ್ರ 1:3, 4).*

ಯೇಸು ಮಾಡಿದ ಒಂದು ಉತ್ತೇಜನಕರವಾದ ವಾಗ್ದಾನವು, “ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವುದು” ಎಂಬುದು (ಮತ್ತಾಯ 5:12; ಲೂಕ 6:23). ಮಹಿಮೆಯಲ್ಲಿ ಇದಕ್ಕಿಂತ ಮಿಗಿಲಾದ ಪರಲೋಕದಲ್ಲಿ ಜೀವದ ನಿರೀಕ್ಷೆಯು ಕ್ರೈಸ್ತರಾದ ನಮಗೆ ಇರುವುದು (ಎಫೆಸ 4:4), ಕ್ರೈಸ್ತರಾಗಿ ಯೋಗ್ಯರಾಗಿರುವಂತೆ ಮಾಡಲು ಇದು ಒಂದು ಆಶೀರ್ವಾದವಾಗಿರುವುದು. ಪರಲೋಕದ ಬಗ್ಗೆ ಯಾವುದೇ ಜನರಿಗೆ ಇಷ್ಟು ಹಾಡುಗಳಿರುವದಿಲ್ಲ ಇಲ್ಲವೇ ಭವಿಷ್ಯದ ಮನೆಯ ಬಗ್ಗೆ ಅಷ್ಟು ಬಹಳ ಸಲ ಹಾಡುವುದಕ್ಕೆ ಹಾಡುಗಳಿರುವದಿಲ್ಲ. ನಮ್ಮ ಪರಲೋಕದ ನಿರೀಕ್ಷೆಯು ಇತರರನ್ನು ದುಃಖಕ್ಕೂ ನಿರಾಶೆಗೂ ನಡಿಸುವ ಅನೇಕ ಶ್ರಮೆಗಳ ಮತ್ತು ಭಾರಗಳ ಮುಖಾಂತರ ಆನಂದದೊಂದಿಗೆ ನಮ್ಮನ್ನು ನಡಿಸುವುದು (1 ಥೆಸಲೊನೀಕ 4:13).

“ಕ್ರೈಸ್ತನ ಜೀವಿತವು ಮರಣಾನಂತರ ಬಹುಮಾನ ವಿರದಿದ್ದರೂ ಇಲ್ಲಿ ಮನುಷ್ಯನು ಜೀವಿಸುವಂಥ ಅತ್ಯುತ್ತಮ ಜೀವಿತವಾಗಿದೆ” ಎಂದು ಯಾರೋ ಒಬ್ಬರು ತೀರ್ಮಾನಿ ಸಿದ್ದಾರೆ. ಇದಕ್ಕೆ ಒಪ್ಪಿಕೊಂಡು, ಪೌಲನು ಹೀಗೆ ಬರೆದಿದ್ದಾನೆ: “ಭಕ್ತಿಯಾದರೋ ಎಲ್ಲಾ ವಿಧದಲ್ಲಿ ಪ್ರಯೋಜನವಾದದ್ದು; ಅದಕ್ಕೆ ಇಹಪರಗಳಲ್ಲಿಯೂ ಜೀವ ವಾಗ್ದಾನ ಉಂಟು” (1 ತಿಮೊಥೆ 4:8). ಯೇಸುವೂ ಅದನ್ನೆ ಬೋಧಿಸಿದನು: “ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು” (ಯೋಹಾನ 10:10). ಸಮೃದ್ಧ ಜೀವವು ಸಮಸ್ಯೆಗಳಿಲ್ಲದೇ ಇರುವದಿಲ್ಲ. “ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು” (2 ತಿಮೊಥೆ 3:12) ಎಂದು ಪೌಲನು ಬರೆದನು. ಪೌಲನು ಸಹಿಸಿದ ಹಿಂಸೆಯು, “ಈ ಜೀವಮಾನ ಕಾಲದ ಪೂರ್ತಿಗೆ ನಾವು ಕ್ರಿಸ್ತನಲ್ಲಿ ನಿರೀ ಕ್ಷೆ ಇಟ್ಟುಕೊಂಡದ್ದೇ ಹೊರತು ಮತ್ತೇನೂ ಇಲ್ಲದಿದ್ದರೆ ಎಲ್ಲಾ ಮನುಷ್ಯರಲ್ಲಿಯೂ ನಿರ್ಭಾಗ್ಯರೇ ಸರಿ” (1 ಕೊರಿಂಥ 15:19) ಎಂದು ಹೇಳುವದಕ್ಕೆ ನಡಿಸಿತು. “ನಾನು ಎಫೆಸದಲ್ಲಿ ಮೃಗಗಳೊಂದಿಗೆ ಯುದ್ಧ ಮಾಡಿದ್ದು ಕೇವಲ ಮಾನುಷಾಭಿಪ್ರಾಯದಿಂದಾದರೆ ನನಗೇನು ಪ್ರಯೋಜನ? ಸತ್ತವರು ಎದ್ದು ಬರುವದಿಲ್ಲವಾದರೆ - ತಿನ್ನೋಣ, ಕುಡಿಯೋಣ, ನಾಳೆ ಸಾಯುತ್ತೇವಲ್ಲಾ” (1 ಕೊರಿಂಥ 15:32; ನೋಡಿರಿ ಯೆಶಾಯ 22:13) ಕ್ರಿಸ್ತನಿಗಾಗಿ ತನ್ನ ಶ್ರಮೆಯನ್ನು ಕುರಿತು ಅವನು ಬರೆದನು.

ಈ ಜೀವನಕ್ಕಿಂತ ಹೆಚ್ಚಾದದ್ದನ್ನು ಮುನ್ನೋಡುವದಕ್ಕೆ ಹೊಸ ಒಡಂಬಡಿಕೆಯು

ಕೊಡುತ್ತದೆ. ಒಂದು ರೀತಿಯಲ್ಲಿ ಪರಲೋಕವು ರಕ್ಷಿಸಲ್ಪಟ್ಟವರ ನಿತ್ಯವಾದ ಮನೆಯಾಗಿದ್ದರೂ, ಪರಿಶುದ್ಧ ಬರಹಗಳಲ್ಲಿ ಬಹಳ ಸಲ ನಮೂದಿಸಲ್ಪಟ್ಟಿರುವದಿಲ್ಲ. ಇಲ್ಲವೇ ವಿವರವಾಗಿ ವಿವರಿಸಲ್ಪಟ್ಟಿರುವದಿಲ್ಲ, ಆದರೆ ಪರಲೋಕದ ಆಶೀರ್ವಾದಗಳು ಅನೇಕ ಸಲ ಸೂಚಿಸಲ್ಪಟ್ಟಿವೆ.

ಪರಲೋಕದಲ್ಲಿ ಒಂದು ಮನೆಗಾಗಿ ನಮ್ಮ ಕ್ರೈಸ್ತ ನಿರೀಕ್ಷೆಯು ನಮಗೆ ಆನಂದವನ್ನು ತರುವಂಥದ್ದಾಗಿರುತ್ತದೆ (ರೋಮಾಪುರ 12:12). ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ಇದ್ದವರಿಗೆ ಮಾಡಿದ ವಾಗ್ದಾನಕ್ಕಿಂತ ಇದು ಹೆಚ್ಚು ಉತ್ತಮವಾದ ವಾಗ್ದಾನವಾಗಿದೆ (ಇಬ್ರಿಯ 8:6; 10:34). ಅವರೊಂದಿಗೆ ದೇವರು ಮಾಡಿದ ಒಡಂಬಡಿಕೆಯನ್ನು ಅವರು ಕೈಕೊಂಡರೆ ದೀರ್ಘಾಯುಷ್ಯ ಮತ್ತು ಸಮೃದ್ಧಿಯೊಂದಿಗೆ ಕಾನನ ದೇಶವು ಅವರಿಗೆ ವಾಗ್ದಾನವಾಗಿ ಕೊಡಲ್ಪಟ್ಟಿತ್ತು (ಧರ್ಮೋಪದೇಶಕಾಂಡ 4:13; 5:33). ವಾಗ್ದಾನ ಮಾಡಿದ್ದೆಲ್ಲವೂ ತನ್ನ ಮೂಲ ಸ್ಥಿತಿಗೆ ಪುನಸ್ಥಾಪಿಸಲ್ಪಟ್ಟ ಭೂಲೋಕದಲ್ಲಿಯ ಒಂದು ಸ್ಥಳವಾಗಿದ್ದರೆ, ಆಗ ನಮ್ಮ ನಿರೀಕ್ಷೆಗೆ ತಳಹದಿಯಾಗಿರುವ, ಹೊಸ ಒಡಂಬಡಿಕೆಯ ಅಧೀನತೆಯಲ್ಲಿರುವ ನಮಗೆ ಇರುವ ದೇವರ ವಾಗ್ದಾನಗಳು ಇಸ್ರಾಯೇಲ್ಯರಿಗೆ ದೇವರು ಕೊಟ್ಟ ನಾಡು ವಾಗ್ದಾನ ಮಾಡುವದಕ್ಕಿಂತ ಹೆಚ್ಚು ಉತ್ತಮ ವಾಗಿರುವದಿಲ್ಲ (ಧರ್ಮೋಪದೇಶಕಾಂಡ 28:1-14). ಹಾಗಿದ್ದರೂ, ನಮ್ಮ ನಿರೀಕ್ಷೆಯು ಸಮೃದ್ಧಿ ಮತ್ತು ಭೂಮಿಯ ಮೇಲೆ ದೀರ್ಘಾಯುಷ್ಯದೊಂದಿಗೆ ಒಂದು ಸ್ಥಳದ ಬದಲು, ಪರಲೋಕದಲ್ಲಿ ಸದಾಕಾಲವೂ ಇರುವ ಸ್ಥಳವಾಗಿರುವುದು (1 ಪೇತ್ರ 1:3, 4).

## ಪರಲೋಕವು ಯಾವುದರಂತಿರುವುದು?

ಬೈಬಲಿನಲ್ಲಿ ವಿವರಿಸಿದಂತೆ ಪರಲೋಕವನ್ನು ಅರ್ಥಮಾಡಿಕೊಳ್ಳುವದಕ್ಕಾಗಿ, ಮೊದಲಿನ ಒಂದು ಪಾಠದಲ್ಲಿ ನಾವು ಅಧ್ಯಯನ ಮಾಡಿದಂತೆ, "ಪರಲೋಕ" ಎಂಬುದು ಮೂರು ಭಿನ್ನವಾದ ಸ್ಥಳಗಳಿಗೆ ಉಪಯೋಗಿಸಲ್ಪಟ್ಟಿರುವದನ್ನು (2 ಕೊರಿಂಥ 12:2-4) ನಾವು ಗುರುತಿಸಬೇಕು: (1) ಮೋಡಗಳಿರುವ (ಧರ್ಮೋಪದೇಶಕಾಂಡ 11:11) ಮತ್ತು ಪಕ್ಷಿಗಳು ಹಾರಾಡುವ ಆಕಾಶ (ಕೀರ್ತನೆ 79:2), (2) ನಕ್ಷತ್ರಗಳಿಂದಲೂ ನಕ್ಷತ್ರ ರಾಶಿಗಳಿಂದಲೂ ತುಂಬಿರುವ ವಿಶ್ವ (ಆದಿಕಾಂಡ 1:14-18; ಧರ್ಮೋಪದೇಶ ಕಾಂಡ 1:10), ಮತ್ತು (3) ಭೂಲೋಕದ ವಿಮೋಚಿತರೆಲ್ಲರೂ ಸದಾಕಾಲ ಜೀವಿ ಸುವ, ದೇವರ ವಾಸಸ್ಥಾನ (1 ಪೇತ್ರ 1:3, 4). ಈ ಕಡೇ ಉಲ್ಲೇಖವು ಈ ಪಾಠದ ವಿಷಯ ವಾಗಿರುತ್ತದೆ.

*"ಪರಲೋಕ ರಾಜ್ಯ" ಎಂಬ ವ್ಯಕ್ತಪಡಿಸುವಿಕೆಯು (1) ದೇವರ ನಿತ್ಯ ರಾಜ್ಯ (ಮತ್ತಾಯ 13:43), (2) ರಕ್ಷಿಸಲ್ಪಟ್ಟವರಿಗಾಗಿ ಸಿದ್ಧವಾದ ರಾಜ್ಯ (ಮತ್ತಾಯ 25:34), ಮತ್ತು (3) ಸಮೀಪವಾಗಿದೆಯೆಂದು ಆತನು ಪ್ರಸಂಗಿಸಿದ ಹಾಗೂ ಪ್ರಸಂಗಿಸಲು ಇತರರನ್ನು ಆತನು ಕಳುಹಿಸಿದ ಕ್ರಿಸ್ತನ ರಾಜ್ಯ, ಇವುಗಳಿಗೆ ಸಂಬಂಧಿಸಿ ಉಪಯೋ ಗಿಸಲ್ಪಟ್ಟಿದೆ.* ರಾಜ್ಯವು "ಪರಲೋಕ ರಾಜ್ಯ" (ಮತ್ತಯ 4:17); "ದೇವರ ರಾಜ್ಯ" (ಮಾರ್ಕ 1:15), "ನನ್ನ ರಾಜ್ಯ" (ಲೂಕ 22:30) ಮತ್ತು "ಆತನ ಪ್ರಿಯ ಕುಮಾರನ ರಾಜ್ಯ" (ಕೊಲೊಸ್ಸೆ 1:13) ಎಂದು ಉಲ್ಲೇಖಿಸಲ್ಪಟ್ಟಿದೆ. ಈ ಮಾತುಗಳ ಮುಖಾಂತರ ಹೋಗುವ ಐಕ್ಯತೆಯ ಎಳೆಯುವ ಅರ್ಥದಲ್ಲಿ ಅವುಗಳನ್ನು ಒಂದುಗೂಡಿಸುತ್ತದೆ, ಯಾಕಂದರೆ ಅವುಗಳಲ್ಲಿ ಪ್ರತಿಯೊಂದು ಪರಲೋಕದ ಆಳ್ವಿಕೆಗೆ ಸಂಬಂಧಿಸಿರುತ್ತದೆ. ಕ್ರಿಸ್ತನು ಪ್ರಸಂಗಿಸಿದ, ಆತನ ವಿಶೇಷ ಆಳ್ವಿಕೆಯು ಹತ್ತಿರವಾಗಿದೆಯೆಂದು ಹೇಳಿದ್ದು

(ಮತ್ತಾಯ 4:17), ಆತನ ದಿವಾರೋಹಣದೊಂದಿಗೆ ಪ್ರಾರಂಭವಾಯಿತು (ಎಫೆಸ 1:19-23) ಮತ್ತು ಆತನು ಹಿಂದಿರುಗಿ ಬರುವಾಗ ಅಂತ್ಯಗೊಳ್ಳುವದು (1 ಕೊರಿಂಥ 15:24). ರಕ್ಷಿಸಲ್ಪಟ್ಟವರು ತಮ್ಮ ನಿತ್ಯ ಬಹುಮಾನವಾಗಿ ಪ್ರವೇಶಿಸುವ ರಾಜ್ಯವಾಗಿ ಈ ಪಾಠವು ಒತ್ತಿಹೇಳುವುದು (ಮತ್ತಾಯ 25:34). ಈ ಪದಗಳ ಉಪಯೋಗವು ಪ್ರತಿಯೊಂದು ವಾಕ್ಯಭಾಗದಲ್ಲಿ ಯಾವ ಅರ್ಥಕೊಡುತ್ತದೆ ಎಂಬುದನ್ನು ಹಿನ್ನೆಲೆಯು ಮಾತ್ರವೇ ನಿರ್ಣಯಿಸುವುದು.

ಪರಲೋಕವು ಮುಟ್ಟಲಾಗುವ, ಪ್ರಾಕೃತಿಕ ಆಯಾಮವಾಗಿರದೇ ಇರುವದರಿಂದ, ಅದನ್ನು ವಿವರಿಸಲು ಉಪಯೋಗಿಸಿದ ಪ್ರಾಕೃತ ಪದಗಳು ಆ ಆತ್ಮಿಕ ಕ್ಷೇತ್ರದ ವಾಸ್ತವಿಕ ತೆಗಳನ್ನು ಸೂಚಿಸುತ್ತವೆಯೆಂದು ಮಾತ್ರವೇ ನಾವು ತಿಳಿದು ಕೊಳ್ಳತಕ್ಕದ್ದು. ಈ ಸ್ಥಳವನ್ನು ಕುರಿತು ಪೌಲನು ಬರೆದನು, “ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವದು; ಕಾಣದಿರುವಂಥದು ಸದಾಕಾಲವೂ ಇರುವದು” (2 ಕೊರಿಂಥ 4:18). ದೇವರು ಪರಲೋಕವನ್ನು ಭೂಲೋಕದ ಮಾತುಗಳಲ್ಲಿ ವಿವರಿಸಿದರೂ, ಅದು ಪ್ರಾಕೃತವಾದಂತೆ ಆಲೋಚಿಸಬಾರದು.

ಭೂಮಿಯು ಆತ್ಮಿಕವಾದ ವಾಸಸ್ಥಳವಾಗಿರಲು ನವೀಕರಿಸಲ್ಪಡುವದಿಲ್ಲ ಇಲ್ಲವೇ ಬದಲಾಯಿಸಲ್ಪಡುವದಿಲ್ಲ. ಅದು ಹಾಗಿದ್ದರೆ, ಆಗ “ಇಗೋ, ಎಲ್ಲವನ್ನೂ ಹೊಸದು ಮಾಡುತ್ತೇನೆ” (ಪ್ರಕಟನೆ 21:5) ಎಂದು ಹೇಳಿದ, ಸಿಂಹಾಸನದ ಮೇಲೆ ಕುಳಿತು ಕೊಳ್ಳುವಾತನ ಬಗ್ಗೆ ನಾವು ಗಂಭೀರವಾಗಿ ತೆಗೆದು ಕೊಳ್ಳುವದಿಲ್ಲ. ಇಲ್ಲವೇ, “ತರುವಾಯ ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಕಂಡೆನು ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು ...” (ಪ್ರಕಟನೆ 21:1) ಎಂಬ ಹೇಳಿಕೆಯನ್ನು ಅಕ್ಷರಶಃವಾಗಿ ತೆಗೆದು ಕೊಳ್ಳುವದಿಲ್ಲ.

ರಕ್ಷಿಸಲ್ಪಟ್ಟವರಿಗಾಗಿ ಇರುವ ಪಟ್ಟಣ, ನೂತನ ಯೆರೂಸಲೇಮ, ಭೂಲೋಕದಲ್ಲಿ ಅತೀ ಹೆಚ್ಚು ಬೆಲೆಯುಳ್ಳವುಗಳೆಂದು ತಿಳಿಯಲ್ಪಟ್ಟಿರುವ ವಸ್ತುಗಳಿಂದ ಮಾಡಲ್ಪಟ್ಟಿರುವಂತೆ ವಿವರಿಸಲ್ಪಟ್ಟಿದೆ (ಪ್ರಕಟನೆ 21:11-21). ಅಂಥ ವಿವರಣೆಯು ಭಯಭಕ್ತಿ ಹುಟ್ಟಿಸುವಂಥದ್ದಾಗಿದೆ ಮತ್ತು ಮಾನವ ಕಲ್ಪನೆಯನ್ನೂ ಮೀರಿದ್ದಾಗಿರುತ್ತದೆ. ಮೃತ್ಯಮಾನವರಿಗಾಗಿ ಈ ಚಿತ್ರ ಇರಬೇಕೆಂದು ದೇವರು ಬಯಸಿದನು. ಆತನ ರಾಜ್ಯದಲ್ಲಿ ನಾವು ಪ್ರಭಾವಕ್ಕೇರಿಸಲ್ಪಡುವಾಗ (1 ಥೆಸಲೊನೀಕ 2:12; ಇಬ್ರಿಯ 2:10), ಆದರ ಭವ್ಯತೆಯನ್ನೂ ಮಹಿಮೆಯನ್ನೂ ನೋಡುವಾಗ (ರೋಮಾಪುರ 8:18), ಮತ್ತು ಆ ಮಹಿಮೆಯಲ್ಲಿ ಪಾಲುಗಾರರಾಗುವಾಗ (1 ಪೇತ್ರ 5:1) ನಾವು ಭಕ್ತಿಪರವಶರಾಗುವೆವು. ಆತನು “ತನ್ನ ಭಕ್ತರಲ್ಲಿ ಮಹಿಮೆ ಪಡಿಸಲ್ಪಡುವನು” (2 ಥೆಸಲೊನೀಕ 1:10). ಅದು ದಾಟಿಹೋಗುವ ಕ್ಷೇತ್ರವಾಗಿರುವದಿಲ್ಲ, ಆದರೆ ಪರಲೋಕದ ನಾಗರಿಕರಂತೆ ನಮಗೆ “ಹೋಲಿಸಲಾಗದ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು” ಒದಗಿಸಿ ಕೊಡುತ್ತದೆ ಎಂಬುದರ ಬಗ್ಗೆ ನಾವು ಪ್ರಭಾವಿತರಾಗುತ್ತೇವೆ (2 ಕೊರಿಂಥ 4:17). ಭೂಮಿಯೊಂದಿಗೆ ಹೋಲಿಸುವುದಾದರೆ, ಅದು “ಉತ್ತಮವಾಗಿಯೂ ಸ್ಥಿರವಾಗಿಯೂ ಇರುವ ಆಸ್ತಿಯಾಗಿರುವುದು” (ಇಬ್ರಿಯ 10:34), “ಪರಲೋಕವೆಂಬ ಉತ್ತಮ ದೇಶವಾಗಿರುವುದು ” (ಇಬ್ರಿಯ 11:16).

ಪರಲೋಕದ ಬಗ್ಗೆ ಶುಭವಾರ್ತೆಯು ಅದು ಯಾವಾಗಲೂ ಅಸ್ತಿತ್ವದಲ್ಲಿರುವುದು ಮತ್ತು ಯಾವಾಗಲೂ ಒಂದೇ ರೀತಿಯಲ್ಲಿ ಇರುವುದು. ಈ ಕ್ಷಣಿಕವಾಗಿರುವ ಭೂಮಿಯಂತೆ ಅದು ಇರುವದಿಲ್ಲ. ನಮ್ಮ ನಿರೀಕ್ಷೆಯು, “ಲಯ ಕಳಂಕ ಕ್ಷಯಗಳಿಲ್ಲದ

ನಿಮಗಾಗಿ ಪರಲೋಕದಲ್ಲಿ ಇಟ್ಟಿರುವ ಬಾಧ್ಯಸ್ಥಿಕೆಯಲ್ಲಿ ಇರುವುದು" (1 ಪೇತ್ರ 1:4). ಪರಲೋಕವು "ನುಸಿ ಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವ ಸ್ಥಳವಲ್ಲ ಮತ್ತು ಅಲ್ಲಿ ಕಳ್ಳರು ಕನ್ನಾಕೊರೆಯುವುದೂ ಇಲ್ಲ, ಕದಿಯುವುದೂ ಇಲ್ಲ" (ಮತ್ತಾಯ 6:20; ಲೂಕ 12:33). ಪರಲೋಕವನ್ನು ಪ್ರವೇಶಿಸುವ ಪ್ರತಿಯೊಬ್ಬನಿಗೂ ಹೊಸದೇಹವು ಇರುವುದು, ಒಂದು "ಕೈಯಿಂದ ಕಟ್ಟಿರುವ ಮನೆಯಾಗಿರದೆ ಪರಲೋಕದಲ್ಲಿ ನಿತ್ಯವಾದ ಮನೆಯಿರುವುದು" (2 ಕೊರಿಂಥ 5:1).

ಪರಲೋಕದ ಅತೀ ಆಶ್ಚರ್ಯಕರವಾದ ಸಂಗತಿಯು ದೇವರೊಂದಿಗೆ, ಯೇಸುವಿನೊಂದಿಗೆ, ಪರಿಶುದ್ಧಾತ್ಮನೊಂದಿಗೆ (ಪ್ರಕಟನೆ 21:3) ಮತ್ತು ಜೀವಿಸಿದ ರಕ್ಷಣೆಯೊಂದಿದ ಎಲ್ಲಾ ಅದ್ಭುತವಾದ ಜನರೊಂದಿಗೆ ನಿತ್ಯತ್ವದಲ್ಲೆಲ್ಲಾ ನಮ್ಮ ಅನ್ಯೋನ್ಯತೆಯಾಗಿರುತ್ತದೆ. ಭೂಲೋಕದ ಮೇಲಿನ ಯಾವ ಅನ್ಯೋನ್ಯತೆಯೂ ಪರಲೋಕದಲ್ಲಿ ನಮಗಿರುವ ಅನ್ಯೋನ್ಯತೆಗೆ ಹೋಲಿಕೆಯಲ್ಲಿರಲಾರದು.

ಪರಲೋಕದ ಮಹಿಮೆಯ ಕಡೆಗೆ ನಾವು ಕ್ಷಣಹೊತ್ತು ದಿಟ್ಟಿಸಿ ನೋಡಿದರೆ ಮತ್ತು ನಾವು ಅನುಭವಿಸುವ ಅನ್ಯೋನ್ಯತೆಯ ಕಡೆಗೆ ನೋಡಿದರೆ, ನಾವು ಬಹಳವಾಗಿ ಉತ್ತೇಜೀತರಾಗುವೆವು, ಎಚ್ಚರವಾಗಿರುವ ಪ್ರತಿಯೊಂದು ಕ್ಷಣವನ್ನು ಅದರ ಬಗ್ಗೆ ಕನಸು ಕಾಣುವದರಲ್ಲಿ, ಅದಕ್ಕಾಗಿ ಕಾರ್ಯಮಾಡುವಲ್ಲಿ, ಮತ್ತು ಅದಕ್ಕಾಗಿ ಯೋಜಿಸುವದರಲ್ಲಿ ಕಳೆಯುವೆವು. "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮೆ ಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇವೆ" ಎಂದು ಪೌಲನು ಬರೆದಿದ್ದಾನೆ (ರೋಮಾಪುರ 8:18).

## ಪರಲೋಕದಲ್ಲಿ ಏನು ಇರುವುದು?

ಪರಲೋಕವನ್ನು ಅರ್ಥಮಾಡಿಕೊಳ್ಳಲು ನಮಗೆ ಸಂಕೇತಗಳು ಕೊಡಲ್ಪಟ್ಟಿರುವವು. ನಮಗೆ ಭೂಲೋಕದಲ್ಲಿ ಅವಶ್ಯವಾಗಿರುವಂಥ, ಸೂರ್ಯ, ಚಂದ್ರ, ಇಲ್ಲವೇ ದೀಪದಂಥ ಸಂಗತಿಗಳು ಪರಲೋಕದಲ್ಲಿ ಇರುವದಿಲ್ಲ; ಅಲ್ಲಿ ಯಾವುದೇ ರಾತ್ರಿಯೂ ಇರುವದಿಲ್ಲ, ಯಾಕಂದರೆ ಕುರಿಮರಿಯಾತಾದನು ಬೆಳಕಾಗಿರುವನು (ಪ್ರಕಟನೆ 21:23, 25; 22:5). ದೇವರ ಕಡೆಗೆ ನಮಗೆ ನೇರವಾದ ಸಂಪರ್ಕ ಅಂದರೆ ದೇವಾಲಯದ ಅಗತ್ಯತೆಯಿರುವದಿಲ್ಲ ಎಂದು ಅರ್ಥವಾಗುತ್ತದೆ, ಯಾಕಂದರೆ ದೇವರು ಮತ್ತು ಯಜ್ಞದ ಕುರಿಯಾದಾತನು ದೇವಾಲಯವಾಗಿದ್ದಾನೆ (ಪ್ರಕಟನೆ 21:22).

ನಮಗೆ ದೈಹಿಕ ಆಹಾರದ ಅವಶ್ಯಕತೆಯಿರುವದಿಲ್ಲ, ಯಾಕಂದರೆ ಜೀವನದಿಯ ನೀರಿನಿಂದ ಮತ್ತು ಜೀವವೃಕ್ಷದ ಫಲದಿಂದ ಜೀವವು ಪೋಷಿಸಲ್ಪಡುತ್ತದೆ (ಪ್ರಕಟನೆ 22:1, 2). ನಾವು ಇನ್ನು ಎಂದೂ ದೇವರಿಂದ ದೂರವಾಗಿರುವದಿಲ್ಲ, ಯಾಕಂದರೆ, "ಆತನು ಅವರೊಡನೆ ವಾಸಮಾಡುವನು, ಅವರು ಆತನಿಗೆ ಪ್ರಜೆಗಳಾಗಿರುವರು; ದೇವರು ತಾನೇ ಅವರ ಸಂಗಡ ಇರುವನು" (ಪ್ರಕಟನೆ 21:3). ದೇವರ ಮತ್ತು ಕುರಿಯಾದಾತನ ಸಿಂಹಾಸನವು ಅಲ್ಲಿರುವದು, ಈ ಕಾರಣದಿಂದ, ಅಲ್ಲಿ ಶಾಪಗ್ರಸ್ತವಾದದ್ದು ಯಾವುದೂ ಇರುವದಿಲ್ಲ (ಪ್ರಕಟನೆ 22:3). ನಮ್ಮ ನೂತನ ವಾಸಸ್ಥಳದಲ್ಲಿ ಕೇವಲ ನೀತಿಯು ಮಾತ್ರವೇ ಇರುವುದು (2 ಪೇತ್ರ 3:13).

## ನಾವು ಯಾವುದರಂತೆ ಇರುವೆವು?

ನಮ್ಮ ಶರೀರಿಕ ದೇಹಗಳು ಆತ್ಮಿಕ ದೇಹಗಳಾಗಿ ಬದಲಾಗುವವು (1 ಕೊರಿಂಥ

15:44, 51-54). ನಾವು ಪ್ರವೇಶಿಸಲಿರುವ ಆತ್ಮಿಕ ಆಯಾಮಕ್ಕೆ ಶರೀರಿಕ ದೇಹಗಳು ಯೋಗ್ಯವಾದವುಗಳಲ್ಲ, ಯಾಕಂದರೆ "ಮಾಂಸ ಮತ್ತು ರಕ್ತವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರವು" (1 ಕೊರಿಂಥ 15:50). ದೇವರ ಆತ್ಮನ ಲೋಕವು ಆತನಿಗೆ ಸ್ವಭಾವಿಕವಾದದ್ದಾಗಿದೆ, ಯಾಕಂದರೆ ಆತನು ಆತ್ಮನಾಗಿದ್ದಾನೆ (ಯೋಹಾನ 4:24), ಮತ್ತು ದೇವದೂತರಿಗೂ ಸ್ವಾಭಾವಿಕವಾದದ್ದಾಗಿದೆ ಯಾಕಂದರೆ ಅವರೂ ಸಹ ಆತ್ಮಗಳಾಗಿದ್ದಾರೆ (ಇಬ್ರಿಯ 1:14). ಆ ಲೋಕದಲ್ಲಿ ದೇಹವು ಯಾವ ರೀತಿಯಲ್ಲಿ ಇರುತ್ತದೆ ಎಂಬುದನ್ನು ನಾವು ಅರಿತು ಕೊಳ್ಳಲಾರೆವು, ಆದರೆ "ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1 ಯೋಹಾನ 3:2) ಎಂಬ ಭರವಸೆ ನಮಗಿರುತ್ತದೆ. ದೇವರನ್ನು ನೋಡುವದಕ್ಕಾಗಿ ಆತನ ಆಯಾಮವನ್ನು ನಾನು ಪ್ರವೇಶಿಸತಕ್ಕದ್ದು, ಯಾಕಂದರೆ ಶಾರೀರಿಕ ಜೀವಿಗಳು ದೇವರನ್ನು ಕಾಣಲಾರವು (1 ತಿಮೊಥೆ 6:16). ಯೇಸುವು, "ಎಲ್ಲವನ್ನೂ ತನಗೆ ಅಧೀನಮಾಡಿಕೊಳ್ಳುವ ಪರಾಕ್ರಮವನ್ನು ಸಾಧಿಸಿ ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರ ಪಡಿಸಿ ಪ್ರಭಾವವುಳ್ಳ ತನ್ನ ದೇಹದ ಸಾರೂಪ್ಯವಾಗುವಂತೆ ಮಾಡುವನು" (ಫಿಲಿಪ್ಪಿ 3:20, 21; RSV). ಇದು ಸಂಭವಿಸುವಾಗ, ನಾವು "ಆತನ ಮುಖವನ್ನು" (ಪ್ರಕಟನೆ 22:4) ನೋಡುವೆವು, ಶಾರೀರಿಕ ದೇಹದಲ್ಲಿರುವ ನಮ್ಮಲ್ಲಿ ಯಾರೂ ಆ ಮುಖವನ್ನು ನೋಡಿ ಜೀವಿಸಲಾರೆವು (ವಿಮೋಚನಕಾಂಡ 33:20).

ನಾವು ಬದಲಾಯಿಸಲ್ಪಡುವಾಗ, ಪರಲೋಕದ ಜೀವಿಗಳ ಮಹಿಮೆಯು ನಮಗಿರುವುದು. ಮಹಿಮೆ, ಗೌರವ, ಮತ್ತು ಸಮಾಧಾನದೊಳಗೆ ಪ್ರವೇಶಿಸಿ (ರೋಮಾಪುರ 2:7, 10) ನಾವು ಕ್ರಿಸ್ತನೊಂದಿಗೆ ಮಹಿಮೆ ಪಡಿಸಲ್ಪಡುವೆವು (ರೋಮಾಪುರ 8:17). ನಮ್ಮ ನೂತನ ಸ್ಥಿತಿಯಲ್ಲಿ ನಾವು ನಮ್ಮ ತಂದೆಯ "ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವೆವು" (ಮತ್ತಾಯ 13:43). "ನಾವು ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನು ಧರಿಸಿಕೊಂಡಿರುವ ಪ್ರಕಾರ ಪರಲೋಕದಿಂದ ಬಂದಾತನ ಸಾರೂಪ್ಯವನ್ನೂ ಧರಿಸಿಕೊಳ್ಳಬೇಕು" (1 ಕೊರಿಂಥ 15:49).

ಇನ್ನೆಂದೂ ಸಾಯುವವರಾಗಿರದಂತೆ ನಾವು "ನಿತ್ಯ ಜೀವ"ದೊಂದಿಗೆ ನಿಜವಾದ ಜೀವಿಗಳಾಗಿರುವೆವು (ಲೂಕ 20:36; ಪ್ರಕಟನೆ 21:4). "ನಿತ್ಯಜೀವ" ಅಂದರೆ ಜೀವನ ಗುಣ ಹಾಗೆಯೇ ಜೀವನದ ಉದ್ದಳತೆ ಎಂದರ್ಥವಾಗುವುದು. ಅದು ಈಗ ಹೊಂದಿಕೊಂಡಿರುವುದಕ್ಕೆ[1] ಇಲ್ಲವೇ ಯೇಸುವಿನಲ್ಲಿ ನಂಬಿಕೆಯಿಟ್ಟು ಮತ್ತು ಆತನ ಸೇವೆ ಮಾಡುವದಕ್ಕೆ ಬಹುಮಾನವಾಗಿ ನಾವು ಹೊಂದುವ ಜೀವಕ್ಕೆ ಸಂಬಂಧಿಸಬಹುದು.[2]

ಸತ್ತು ಹೋದ ಅನೀತಿವಂತರು ಜೀವಿಸುವದರಲ್ಲಿ ಮುಂದರಿಯುವರು. ಹಾಗಿದ್ದರೂ, ಅವರ ನಿತ್ಯ ಅಸ್ತಿತ್ವವು "ನಿತ್ಯಜೀವ" ಎಂದು ತಿಳಿಯಲ್ಪಡಬಾರದು; ಆದರೆ ಅದನ್ನು "ನಿತ್ಯಮರಣ" ಎಂದು ಕರೆಯಬೇಕು, ಅದು ಎರಡನೆಯ ಮರಣ, ಬೆಂಕಿಯ ಕೊಳ್ಳವಾಗಿರುವುದು (ಪ್ರಕಟನೆ 20:14).

## ನಾವು ಏನು ಮಾಡುತ್ತಿರುವೆವು?

ನಾವು ಪರಲೋಕದಲ್ಲಿ ಏನು ಮಾಡುವೆವು ಎಂಬುದರ ಬಗ್ಗೆ ದೇವರು ನಮಗೆ ಪೂರ್ಣ ವಿವರಣೆಯನ್ನು ಕೊಟ್ಟಿರುವದಿಲ್ಲ, ಬಹಶಃ ಇದು ಒಳ್ಳೇ ಕಾರಣಕ್ಕಾಗಿ ಇರಬಹುದು. ನಾವು ಪ್ರಾಕೃತರಾಗಿರುವದರಿಂದ, ಆತ್ಮಿಕ ಜೀವಿಗಳು ಮಾಡುವಂಥದ್ದು

ಬಹಳ ಉತ್ತೇಜನಕಾರಿಯಾಗಿರುವದೆಂದು ನಾವು ಯೋಚಿಸಬಾರದು. ಚಿಕ್ಕ ಬಾಲಕನಾಗಿದ್ದಾಗ, ನಾನು ಪ್ರೌಢನಾಗಿ ಬೆಳೆಯಬಾರದು ಎಂದು ಯೋಚಿಸುತ್ತಿದ್ದೆನು, ಯಾಕಂದರೆ ಪ್ರೌಢರ ಚಟುವಟಿಕೆಯಲ್ಲಿ ಯಾವುದೇ ಉತ್ತೇಜನವಿಲ್ಲವೆಂದು ತಿಳಿಯುತ್ತಿದ್ದೆನು. ನಮ್ಮ ಸುಖವು ಸಾಮಾನ್ಯವಾಗಿ ಭೌತಿಕವಸ್ತುಗಳ ಮೇಲೆ ಅವಲಂಬಿಸಿರುವದರಿಂದ, ಪರಲೋಕದ ಆತ್ಮಿಕ ಚಟುವಟಿಕೆಗಳ ಬಗ್ಗೆ ಕುತೂಹಲ ಭರಿತರಾಗುವುದು ಕಷ್ಟಕರವಾದದ್ದಾಗುತ್ತದೆ.

ಪರಲೋಕದಲ್ಲಿ ನಾವು ಸುಖವನ್ನು ಮಾತ್ರವೇ ತಿಳಿದು ಕೊಳ್ಳುತ್ತೇವೆ, ಯಾಕಂದರೆ ದೇವರು, "ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು. ಇನ್ನು ಮರಣವಿರುವದಿಲ್ಲ. ಇನ್ನು ದುಃಖವಾಗಲಿ, ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ. ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" (ಪ್ರಕಟನೆ 21:4) ನಮ್ಮ ದುಃಖಕ್ಕೆ ಕಾರಣವಾದ ಇಲ್ಲವೇ ನಮಗೆ ಶಾಪವಾಗಿದ್ದ ಈ ಜೀವನದ ದೈಹಿಕ ಸಂಗತಿಗಳು ಇನ್ನು ಮುಂದೆ ಅಸ್ತಿತ್ವದಲ್ಲಿ ಇರುವದಿಲ್ಲ (ಪ್ರಕಟನೆ 22:3). ರಕ್ಷಿಸಲ್ಪಟ್ಟವರು ನಮ್ಮ ಯಜಮಾನನ "ಆನಂದ"ದಲ್ಲಿ ಪ್ರವೇಶಿಸುವರು (ಮತ್ತಾಯ 25:21, 23). ಈ ಜೀವನ ಶ್ರಮೆಗಳಿಂದ ವಿಶ್ರಾಂತಿಪಡೆದು ಕೊಳ್ಳಲು ಹೋಗುವೆವು (ಪ್ರಕಟನೆ 14:13; ಇಬ್ರಿಯ 4:8-11).

ನಿತ್ಯತ್ವದಲ್ಲೆಲ್ಲಾ ನಾವು ಆನಂದಿಸುವೆವು ಯಾಕಂದರೆ ನಾವು ತಂದೆಯೊಂದಿಗೆ (ಪ್ರಕಟನೆ 21:3), ಯೇಸುವಿನೊಂದಿಗೆ (ಯೋಹಾನ 12:26),[3] ದೇವದೂತರೊಂದಿಗೆ (ಲೂಕ 9:26) ಮತ್ತು ರಕ್ಷಿಸಲ್ಪಟ್ಟವರೊಂದಿಗೆ (ಮತ್ತಾಯ 13:43) ಇರುವೆವು. ನಾವು ಹರ್ಷದೊಡನೆ ಯೇಸುವಿನ ಸೇವೆ ಮಾಡುವೆವು (ಪ್ರಕಟನೆ 22:3) ಮತ್ತು ಸದಾಕಾಲವೂ ಆತನೊಂದಿಗೆ ಆಳುವೆವು (2 ತಿಮೊಥೆ 2:12; ಪ್ರಕಟನೆ 22:5). ದೇವಜನರಲ್ಲಿ ಆತನು ಮಹಿಮೆ ಹೊಂದುವನು (2 ಥೆಸಲೊನೀಕ 1:10). ಇದರ ಅರ್ಥ ಯೇಸುವು ರಕ್ಷಿಸಿದವರಿಂದ ಆತನು ಗೌರವವನ್ನೂ ಭಕ್ತಿಯನ್ನೂ ಹೊಂದುವನು (ಫಿಲಿಪ್ಪಿ 2:10, 11). ಪರಲೋಕವು ಪ್ರೀತಿಯ, ಅನ್ಯೋನ್ಯತೆಯ ಮತ್ತು ಸಂತೋಷಪಡುವ ಅದ್ಭುತವಾದ ಸ್ಥಳವಾಗಿರುವುದು.

## ಯಾರು ಪರಲೋಕಕ್ಕೆ ಹೋಗುವರು?

"ನನ್ನನ್ನು ಸ್ವಾಮೀ, ಸ್ವಾಮೀ ಅನ್ನುವವರೆಲ್ಲರೂ ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ, ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು" (ಮತ್ತಾಯ 7:21) ಎಂದು ಯೇಸು ಹೇಳಿದನು. "ಆತನು ... ತನಗೆ ವಿಧೇಯರಾಗುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿಯ 5:9). "ಯಾರು ಪ್ರಭಾವಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇಯದನ್ನು ಬೇಸರಗೊಳ್ಳದೆ ಮಾಡುತ್ತಾರೋ" ಅವರು ನಿತ್ಯಜೀವವನ್ನು ಹೊಂದಿಕೊಳ್ಳುವರು (ರೋಮಾಪುರ 2:7) ಮತ್ತು "ಒಳ್ಳೇದನ್ನು ಮಾಡುವ ಪ್ರತಿಯೊಬ್ಬನಿಗೆ" ದೊರೆಯುವುದು (ರೋಮಾಪುರ 2:10).

ಪರಲೋಕದ ಮಹಿಮೆಗಳು ಅರ್ಹತೆಯ ತಳಹದಿಯ ಮೇಲೆ ಕೊಡಲ್ಪಡುವದಿಲ್ಲ, ಆದರೆ ಕೃಪೆಯ ತಳಹದಿಯ ಮೇಲೆ ಕೊಡಲ್ಪಡುತ್ತದೆ (2 ಥೆಸಲೊನೀಕ 2:16). ನಮ್ಮ ಒಳ್ಳೇ ಕಾರ್ಯಗಳಿಂದ ನಾವು ಪರಲೋಕವನ್ನು ಪಡೆದು ಕೊಂಡಿದ್ದೇವೆ ಎಂದು ಕೊಚ್ಚಿಕೊಳ್ಳಲು ನಾವು ಶಕ್ತರಾಗಿರುವದಿಲ್ಲ (ಎಫೆಸ 2:8, 9; ತೀತ 3:5). "ಮಾಡಬೇಕಾದದ್ದನ್ನೇ ಮಾಡಿದ್ದೇವೆ" ಎಂದು ನಾವು ಹೇಳುವೆವು (ಲೂಕ 17:10).

ಪರಲೋಕವು ನಮಗೆ ಒಂದು ಸ್ವಾಸ್ತ್ಯದಂತೆ ಕೊಡಲ್ಪಡುವುದು.[4] ಒಂದು ಸ್ವಾಸ್ತ್ಯವು ಸಂಪಾದಿಸಲ್ಪಡುವದಿಲ್ಲ; ಅದು ಒಂದು ವರವಾಗಿರುತ್ತದೆ. ಬಾಧ್ಯಸ್ಥರು ದೇವರ ಮಕ್ಕಳಾಗಿರುವರು (ರೋಮಾಪುರ 8:16, 17; ಗಲಾತ್ಯ 3:6, 7, 29). ನೀರಿನಿಂದಲೂ ಆತ್ಮನಿಂದಲೂ ಹೊಸದಾಗಿ ಹುಟ್ಟುವದರಿಂದ (ಯೋಹಾನ 3:5), ನಾವು ದೇವರಿಂದ ಹುಟ್ಟಿದವರಾಗುತ್ತೇವೆ (ಯೋಹಾನ 1:12, 13). ಈ ರೀತಿಯಲ್ಲಿ ನಾವು ದೇವರ ಮಕ್ಕಳಾಗುತ್ತೇವೆ ಮತ್ತು ನಂಬಿಕೆ ಹಾಗೂ ಬಾಪ್ತಿಸ್ಮದ ಮುಖಾಂತರ ಪರಲೋಕದ ಬಾಧ್ಯಸ್ಥರಾಗುತ್ತೇವೆ (ಗಲಾತ್ಯ 3:26, 27).

ಪರಲೋಕವನ್ನು ಪ್ರವೇಶಿಸದವರು ದೇವರಿಗೆ ವಿರೋಧವಾಗಿ ದಂಗೆ ಏಳುವವರೂ ಅನೈತಿಕ ಜೀವನಗಳನ್ನು ಜೀವಿಸುವವರೂ ಆಗಿದ್ದಾರೆ (1 ಕೊರಿಂಥ 6:9, 10; ಗಲಾತ್ಯ 5:19-21). ಯೇಸುವಿನ ರಕ್ತದಿಂದ ಅವರು ಶುದ್ಧೀಕರಿಸಲ್ಪಡದೇ ಇದ್ದುದರಿಂದ, ಅವರು ಹೊಲೆಯಾಗಿ ಇರುವರು ಮತ್ತು ಪರಲೋಕವನ್ನು ಸೇರಲಾರರು (ಪ್ರಕಟನೆ 21:27; 2 ಪೇತ್ರ 3:13). ಪರಲೋಕವನ್ನು ಪ್ರವೇಶಿಸುವವರು ಯೇಸುವಿನ ರಕ್ತದಿಂದ ಶುದ್ಧೀಕರಿಸಲ್ಪಟ್ಟವರು ಆಗಿರುವರು (ಎಫೆಸ 5:25-27; ಕೊಲೊಸ್ಸೆ 1:19-22).

## ಎಲ್ಲರಿಗೂ ಒಂದೇ ರೀತಿಯ ಬಹುಮಾನ ಕೊಡಲ್ಪಡುವುದೋ

ದೇವರು ವಿವಿಧ ದರ್ಜೆಗಳ ಬಹುಮಾನಗಳನ್ನು ಕೊಡುವನೆಂದು ಕೆಲವರು ತೀಳಿ ಯುತ್ತಾರೆ. ಮೂರು ಭಿನ್ನವಾದ ಕಿರೀಟಗಳು ನಮೂದಿಸಲ್ಪಟ್ಟ ಸಂಗತಿಯ ಮೇಲೆ ಕೆಲವರು ಈ ತೀರ್ಮಾನವನ್ನು ಅವಲಂಭಿಸುತ್ತಾರೆ: “ನೀತಿಯ” (2 ತಿಮೊಥೆ 4:8), “ಮಹಿಮೆಯ” (1 ಪೇತ್ರ 5:4), ಮತ್ತು “ಜೀವನ” (ಪ್ರಕಟನೆ 2:10; ಯಾಕೋಬ 1:12) ಕಿರೀಟಗಳು, ಇವು ಬಹುಮಾನಗಳ ದರ್ಜೆಗಳಾಗಿರುವದಿಲ್ಲ, ಆದರೆ ಎಲ್ಲಾ ನೀತಿವಂತರ ಆಶೀರ್ವಾದಗಳ ವಿವರಣೆಯಾಗಿರುವುದು.

ಎಲ್ಲರೂ ಒಂದೇ ರೀತಿಯ ಬಹುಮಾನಗಳನ್ನು ಪಡೆಯುವರು ಎಂಬುದಕ್ಕೆ ಒಂದು ಒಳ್ಳೇ ಉದಾಹರಣೆಯಿರುವುದು, ಒಂದು ತಾಸಿನಿಂದ ಇಡೀ ದಿನ, ಬೇರೆ ಬೇರೆ ತಾಸುಗಳ ವರೆಗೆ ಕೆಲಸ ಮಾಡಿದವರನ್ನು ಕುರಿತ ಸಾಮ್ಯದಲ್ಲಿ, ಅವರೆಲ್ಲರೂ ಒಂದೇ ರೀತಿಯ ಸಂಬಳಪಡೆದರೆಂದು ಯೇಸು ಹೇಳಿದನು (ಮತ್ತಾಯ 20:2-15). ಎಲ್ಲವನ್ನೂ ಕೊಟ್ಟುಬಿಟ್ಟವರು ನಿತ್ಯಜೀವವನ್ನು ಪಡೆದು ಕೊಳ್ಳುವರು ಎಂದೂ ಯೇಸು ಹೇಳಿದನು (ಲೂಕ 18:30), ಆದರೆ ಹೆಚ್ಚು ದೊಡ್ಡ ಬಹುಮಾನಗಳ ಬಗ್ಗೆ ಆತನು ಏನನ್ನೂ ಹೇಳಲಿಲ್ಲ. ಬೇರೆಯವರಿಗಿಂತ ಕೆಲವರಿಗೆ ಹೆಚ್ಚು ಬಹುಮಾನ ಕೊಡುವದರಲ್ಲಿ ದೇವರು ನ್ಯಾಯವುಳ್ಳವನಾಗಿರುವನು; ಆದ್ಯಾಗ್ಯೂ ಯಾರೂ ಪರಲೋ ಕಕ್ಕೆ ಅರ್ಹರಾಗಿರುವದಿಲ್ಲ. ದೇವರು ಎಲ್ಲರಿಗೂ ಒಂದೇ ರೀತಿಯ ಬಹುಮಾನವನ್ನು ಕೊಟ್ಟರೆ, ಸಾಮ್ಯವು ಸೂಚಿಸಿದಂತೆ (ಮತ್ತಾಯ 20:2-15), ಆತನು ಇನ್ನೂ ತನ್ನ ಕೃಪೆಯನ್ನು ಎಲ್ಲರಿಗೂ ತೋರಿಸುತ್ತಿರುವನು.

## ನಾವು ಒಬ್ಬರನ್ನೊಬ್ಬರು ಗುರುತಿಸುವೆವೋ?

ನಾವು ಒಬ್ಬರನ್ನೊಬ್ಬರು ಗುರುತಿಸಿದರೆ, ಪರಲೋಕದಲ್ಲಿ ನಮಗೆ ದುಃಖವಿರುವುದು, ಯಾಕಂದರೆ ನಮ್ಮಲ್ಲಿ ಕೆಲವರು ಅಲ್ಲಿಗೆ ಬರಲಿಕ್ಕಾಗಲಿಲ್ಲ ಎಂದು ತಿಳಿದು ಕೊಳ್ಳುತ್ತೇವೆ ಎಂದು ಕೆಲವರು ವಾದಿಸುತ್ತಾರೆ. ಇದೊಂದು ಸಮಸ್ಯೆಯಾಗ ಬಹುದು; ಹಾಗಿದ್ದರೂ,

ಪರಲೋಕಕ್ಕೆ ಹೋಗುವ ನಾವು ದೇವರು ಮಾಡುವಂತಾ ಆತನ ನ್ಯಾಯವನ್ನು ಅರ್ಥ ಮಾಡಿಕೊಳ್ಳುವೆವು. ಈ ಕಾರಣದಿಂದ, ಆತನು ಕೊಡುವ ತೀರ್ಮಾನದಿಂದ ನಾವು ತೃಪ್ತರಾಗುವೆವು.

ನಮ್ಮ ಭೂಲೋಕ ದೇಹಗಳಂತೆ ನಮ್ಮ ಆತ್ಮಿಕ ದೇಹಗಳು ಕಾಣದೇ ಇರುವದರಿಂದ ನಾವು ಒಬ್ಬರನ್ನೊಬ್ಬರು ಗುರುತಿಸುವದಿಲ್ಲ ಎಂದು ಕೆಲವರು ತೀರ್ಮಾನಿಸಿದ್ದಾರೆ. ತಮ್ಮ ದೇಹಗಳನ್ನು ಬಿಟ್ಟನಂತರ ಅಬ್ರಹಾಮನ ಎದೆಯಲ್ಲಿ ಲಾಜರನನ್ನು ಐಶ್ವರ್ಯವಂತನು ಗುರುತಿಸಿದನು. ಪೌಲನು ಥೆಸಲೊನೀಕದ ಸಹೋದರರಿಗೆ, ಕ್ರಿಸ್ತನ ಬರೋಣದಲ್ಲಿ ಅವರು ತನ್ನ ಆನಂದಕ್ಕೆ ಮತ್ತು ಮಹಿಮೆಗೆ ಕಾರಣರಾಗುವರೆಂದು ಹೇಳಿದನು (1 ಥೆಸಲೊನೀಕ 2:19, 20). ಅವನು ಅವರನ್ನು ಗುರುತಿಸದಿದ್ದರೆ, ಮತ್ತು ರಕ್ಷಿಸಲ್ಪಟ್ಟವರಲ್ಲಿ ಅವರಿದ್ದರೆಂಬುದನ್ನು ತಿಳಿಯದಿದ್ದರೆ, ಅವರು ಹೇಗೆ ಆನಂದಿಸುವದಕ್ಕೆ ಅವನಿಗೆ ಕಾರಣವಾಗಿರುವರು? ಪರಲೋಕದಲ್ಲಿ ನೀತಿವಂತರು ಭೂಲೋಕದಲ್ಲಿ ತಮ್ಮೊಂದಿಗೆ ಇದ್ದ ರಕ್ಷಿಸಲ್ಪಟ್ಟ ಸ್ನೇಹಿತರೊಂದಿಗೆ ಮತ್ತು ಭೂಲೋಕದಲ್ಲಿ ರಕ್ಷಿಸಲ್ಪಟ್ಟವರೆಲ್ಲರೊಂದಿಗೆ ನಿತ್ಯತ್ವದಲ್ಲೆಲ್ಲಾ ಅನ್ಯೋನ್ಯತೆಯನ್ನು ಅನುಭವಿಸುವರು.

## ಮುಕ್ತಾಯ

ನಮ್ಮ ಹೃದಯಗಳಲ್ಲಿ ಅತಿಯಾಗಿ ಇಟ್ಟುಕೊಂಡಿರುವ ಕನಸುಗಳೆಲ್ಲವನ್ನೂ ದಾಟಿ ಪರಲೋಕವು ಅದ್ಭುತಕರವಾದ ಸ್ಥಳವಾಗಿರುತ್ತದೆ. ಯೇಸುವು ಇರುವ ಆ ಆತ್ಮಿಕ ಲೋಕವನ್ನು ಪ್ರವೇಶಿಸುವುದು ನಮ್ಮ ಅತೀ ದೊಡ್ಡ ಹೆಬ್ಬಯಕೆ ಆಗಿರಬೇಕು. ಅದ್ಭುತಕರವಾದ ಅನ್ಯೋನ್ಯತೆಯಿರುವ, ಪರಲೋಕದಲ್ಲಿ ನಿತ್ಯತ್ವದಲ್ಲೆಲ್ಲಾ ನೂತನ ಆತ್ಮಿಕ ಅಸ್ತಿತ್ವವನ್ನು ನಾವು ಅನುಭವಿಸುವೆವು. ಇನ್ನು ಮುಂದೆ ನೋವಾಗಲೀ, ದುಃಖವಾಗಲೀ, ಇಲ್ಲವೇ ಅಳುವಿಕೆಯಾಗಲೀ ಇರುವುದಿಲ್ಲ. ಎಲ್ಲವೂ ಆನಂದವೂ, ಸಂತೋಷವೂ ಸಮಾಧಾನವೂ ಇರುವುದು.

# ಪ್ರಕಟನೆಯಲ್ಲಿ 144,000

*144,000 ಜನರು ಮಾತ್ರವೇ ಯೇಸುವಿನೊಂದಿಗೆ ಆಳ್ವಿಕೆ ಮಾಡಲು ಪರಲೋಕಕ್ಕೆ ಹೋಗುವವರೋ ಮತ್ತು ವಿಮೋಚಿತರಲ್ಲಿ ಉಳಿದವರು ಭೂಲೋಕದ ಪರದೈಸದ ಮೇಲೆ ಜೀವಿಸುವವರೋ?* ಕೆಲವರು ಪ್ರಕಟನೆಯಲ್ಲಿಯ ಬಹಳವಾಗಿ ಸಾಂಕೇತಿಕವಾಗಿರುವ ವಾಕ್ಯಗಳನ್ನು ಅಕ್ಷರಶಃವಾಗಿ ತೆಗೆದು ಕೊಳ್ಳುವವರಾದುದರಿಂದ, ಅವರು "144,000" ಎಂಬುದು ಪರಲೋಕಕಕ್ಕೆ ಹೋಗುವ ಎಲ್ಲರ ಅಕ್ಷರಶಃ ಸಂಖ್ಯೆಯಾಗಿದೆ ಎಂದು ನಂಬುತ್ತಾರೆ. ಹೀಗಿದ್ದರೂ ಅಕ್ಷರಶಃವಾದ ನಿರ್ಣಯವು ಸಮಸ್ಯೆಗಳನ್ನು ಮುಂದಿಡುತ್ತದೆ:

(1) 144,000 ಎಲ್ಲರೂ ಇಸ್ರಾಯೇಲಿನ ಹನ್ನೆರಡು ಗೋತ್ರಗಳೆಂದು ಹೇಳಲ್ಪಟ್ಟಿದ್ದಾರೆ, ಅವರು ವೈಯಕ್ತಿಕ ಹೆಸರಿನಿಂದ ಯಾದಿ ಮಾಡಲ್ಪಟ್ಟಿದ್ದಾರೆ, ದಾನನನ್ನು ಹೊರತುಪಡಿಸಿ (ಪ್ರಕಟನೆ 7:4-8). ಇದರ ಅರ್ಥ ಯಾವುದೇ ಅನ್ಯಜನಾಂಗದವನು ಪರಲೋಕಕಕ್ಕೆ ಹೋಗುವದಿಲ್ಲ.

(2) ಯಾವದೇ ಮನುಷ್ಯನು ಎಣಿಸಲಾಗದಂಥ ಸಮೂಹವು ಸಿಂಹಾಸನದ ಮುಂದೆ ನಿಂತಿರುವುದು ವಿವರಿಸಲ್ಪಟ್ಟಿದೆ (ಪ್ರಕಣನೆ 7:9). ಸಿಂಹಾಸನವು ಪರಲೋಕದಲ್ಲಿ ಇರುತ್ತದೆ[1] ಅಂದರೆ ಕೇವಲ 144,000 ಜನರು ಅಷ್ಟೇ ಅಲ್ಲ, ಜನ ಸಮೂಹವೂ ಪರಲೋಕದಲ್ಲಿರುವುದು.

(3) ಕೇವಲ ಒಂದೇ ನೀರೀಕ್ಷೆಯಿರುವುದು (ಎಫೆಸ 4:4), ಒಂದೇ ವಾಗ್ದಾತ್ತ ಬಾಧ್ಯಸ್ಥಿಕೆಯಿರುವುದು, ಅದು ಪರಲೋಕವಾಗಿರುವುದು (ಕೊಲೊಸ್ಸೆ 1:5; 1 ಪೇತ್ರ 1:3, 4), ಭೂಮಿಯು, ಕೆಲವರಿಗೆ ನಿರೀಕ್ಷೆಯಂತೆ ಮತ್ತು ಪರಲೋಕವು ಇತರರಿಗೆ ನಿರೀಕ್ಷೆಯಂತೆ, ಎರಡು ನಿರೀಕ್ಷೆಗಳಿರುವವು, ಒಂದೇ ನಿರೀಕ್ಷೆ ಇರುವದಿಲ್ಲ.

(4) ಕ್ರೈಸ್ತರ ನಾಗರಿಕತ್ವವು ಪರಲೋಕದಲ್ಲಿರುವುದು (ಫಿಲಿಪ್ಪಿ 3:20). ಪರಲೋಕದಿಂದ ದೂರ ಇರುವವರೆಗೆ ನಾವು ಪ್ರವಾಸಿಗಳೂ ಪರದೇಶಸ್ಥರೂ ಆಗಿರುವೆವು (1 ಪೇತ್ರ 2:11). ನಾವು ನಾಗರಿಕತ್ವ ಹೊಂದಿರುವಲ್ಲಿ ನಾವು ವಾಸಿಸುವಾಗ ಮಾತ್ರವೇ ಅದು ನಮ್ಮ ಮನೆಯಾಗಿರುವುದು. ಆದುದರಿಂದ ಪರಲೋಕವು, ಆದರೆ ಭೂಲೋಕವಲ್ಲ, ಎಲ್ಲಾ ಕ್ರೈಸ್ತರಿಗೆ ನಿತ್ಯವಾದ ಮನೆಯಾಗಿರತಕ್ಕದ್ದು.

(5) ಯೇಸುವು ನಮಗಾಗಿ ಒಂದು ಸ್ಥಳವನ್ನು ಸಿದ್ಧ ಮಾಡಲು ಹೋದನು, ಆತನಿರುವಲ್ಲಿಯೇ ನಾವು ಇರುವುದಕ್ಕಾಗಿ ಆತನು ಹಾಗೆ ಮಾಡಿದನು (ಯೋಹಾನ 14:3). ಆತನು ಪರಲೋಕಕ್ಕೆ ಹೋದನು (1 ಪೇತ್ರ 3:22). ಆದುದರಿಂದ ನಾವು ಹೋಗಬೇಕಾದದ್ದು ಪರಲೋಕವಾಗಿರತಕ್ಕದ್ದು.

(6) ನಿಜವಾದ ಸ್ಥಳದಂತೆ ಭೂಮಿಯು ತಾತ್ಕಾಲಿಕವಾದದ್ದಾಗಿದೆ, ಆದರೆ ನಿತ್ಯವಾದದ್ದಾಗಿರುವದಿಲ್ಲ (2 ಕೊರಿಂಥ 4:18); ಆದುದರಿಂದ ಅದು ಅಳಿದು ಹೋಗುವುದು (ಮತ್ತಾಯ 24:35). ಸುಟ್ಟುಹೋಗಲಿಕ್ಕಿರುವಂಥ ಈ ಭೂಲೋಕವು (2 ಪೇತ್ರ 3:10) ನಮ್ಮ ನಿತ್ಯವಾದ ಮನೆಯಾಗಿರಲಾರದು.

(7) ನಮ್ಮ ನಿತ್ಯವಾದ ಮನೆಯು ಪರಲೋಕದಲ್ಲಿರುವುದು (2 ಕೊರಿಂಥ 5:1).

*144,000 ಯೇಸುವಿನ ಸಭೆಯ ಕೇವಲ ಒಂದು* ಸಂಕೇತವಾಗಿರಬಹುದು, ಯಾಕಂದರೆ ಅವರ ಬಗ್ಗೆ ಹೇಳಲ್ಪಟ್ಟ ಪ್ರತಿಯೊಂದೂ ಸಭೆಯ ಬಗ್ಗೆ ಹೇಳಲ್ಪಟ್ಟಿದೆ. ಇದಕ್ಕಿಂತ ಚೆನ್ನಾಗಿ ಸಭೆಯು ವಿವರಿಸಲ್ಪಡಲಾರದು.

| *144,000* | *ವಿವರಣೆ* | *ಸಭೆ* |
|---|---|---|
| ಪ್ರಕಟನೆ 7:3 | ದೇವರ ಸೇವಕರು | 1 ಪೇತ್ರ 2:16 |
| ಪ್ರಕಟನೆ 7:4 | ಮುದ್ರಿಸಲ್ಪಟ್ಟವರು | 2 ಕೊರಿಂಥ 1:22; ಎಫೆಸ 1:13; 4:30 |
| ಪ್ರಕಟನೆ 7:4 | ದೇವರ ಇಸ್ರಾಯೇಲ | ಗಲಾತ್ಯ 6:16 |
| ಪ್ರಕಟನೆ 14:1 | ಚಿಯೋನ್ ಬೆಟ್ಟದ ಮೇಲೆ | ಇಬ್ರಿಯ 12:22, 23 |
| ಪ್ರಕಟನೆ 14:1 | ತಂದೆಯ ಹೆಸರನ್ನು ಧರಿಸಿರುವರು | ಎಫೆಸ 3:15; ಪ್ರಕಟನೆ 3:12 |
| ಪ್ರಕಟನೆ 14:1 | ಯೇಸುವಿನ ಹೆಸರನ್ನು ಧರಿಸಿರುವರು | ಯಾಕೋಬ 2:7; ಅಪೊಸ್ತಲರ ಕೃತ್ಯ 11:26 |
| ಪ್ರಕಟನೆ 14:3 | ಕೊಂಡು ಕೊಳ್ಳುವವರು | ಅಪೊಸ್ತಲರ ಕೃತ್ಯ 20:28 |
| ಪ್ರಕಟನೆ 14:4 | ಮಲಿನರಾಗದವರು | ಎಫೆಸ 5:27 |
| ಪ್ರಕಟನೆ 14:4 | ಕನ್ಯೆಯರು | 2 ಕೊರಿಂಥ 11:2 |
| ಪ್ರಕಟನೆ 14:4 | ಕುರಿಮರಿಯಾದಾತನನ್ನು ಹಿಂಬಾಲಿಸುವವರು | ಯೋಹಾನ 10:27; 1 ಪೇತ್ರ 2:21 |
| ಪ್ರಕಟನೆ 14:4 | ಪ್ರಥಮ ಫಲಗಳು | ಇಬ್ರಿಯ 12:23; ಯಾಕೋಬ 1:18 |
| ಪ್ರಕಟನೆ 14:5 | ಬಾಯಲ್ಲಿ ಸುಳ್ಳು ಇಲ್ಲದವರು | |

*"ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು" (ಪ್ರಕಟನೆ 7:9-17) ಇದು ಆಗಲೇ ಜೀವನದಿಂದ ಅಗಲಿಹೋದ ಎಲ್ಲಾ ಯುಗಗಳ ವಿಮೋಚಿತರನ್ನು ಪ್ರತಿನಿಧೀಕರಿಸಬಹುದು.* ಈ ಸಮೂಹವು ಪ್ರಕಟನೆಯಲ್ಲಿ ನೂತನ ಯೆರೂಸಲೇಮನ್ನು ಪ್ರವೇಶಿಸುವವರ ರೀತಿಯಲ್ಲಿಯೇ ವಿವರಿಸಲ್ಪಟ್ಟಿರುವುದು: (1) ಅವರು ಸಕಲ ಜನಾಂಗದವರು (7:9; 21:24); (2) ಅವರು ಬಿಳೀ ನಿಲುವಂಗಿಗಳನ್ನು ಧರಿಸಿದವರು (7:9; 19:14); (3) ಅವರು ಕುರಿಮರಿಯಾದಾತನೊಂದಿಗಿದ್ದವರು (7:9; 21:22; 22:1); (4) ಅವರು ಸಿಂಹಾಸನ ಇದ್ದಲ್ಲಿ ಇದ್ದವರು (7:9; 22:3); (5) ಅವರು ರಕ್ಷಿಸಲ್ಪಟ್ಟವರು (7:10; 21:27); (6) ಅವರು ತೊಳೆದ ನಿಲುವಂಗಿಗಳನ್ನು ಧರಿಸುವರು (7:14; 19:8; 22:14); (7) ಅವರು ಆತನ ಸೇವೆ ಮಾಡುವರು (7:15; 22:3); (8) ಅವರು ದೇವರ ಆಲಯದಲ್ಲಿರುವರು, ದೇವರು ತಾನೇ ಆಲಯವಾಗಿರುವರು (7:15; 21:22); (9) ದೇವರು ಅವರೊಂದಿಗೆ ವಾಸಿಸುವನು (7:15; 21:3); (10) ಅವರಿಗೆ ಹಸಿವೆಯಾಗುವದಿಲ್ಲ (17:16; 22:2); (11) ಅವರಿಗೆ ಬಾಯಾರಿಕೆಯಾಗುವದಿಲ್ಲ (7:16; 21:6; 22:1); (12) ಅವರಿಗೆ ಸೂರ್ಯನು ಬೇಕಾಗಿಲ್ಲ (7:16; 21:23; 22:5); (13) ಅವರಿಗೆ ಜೀವಜಲವಿರುವುದು (7:17; 21:6); ಮತ್ತು (14) ದೇವರು ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು (7:17; 21:4).

ಯೇಸುವಿಗೆ ವಿಧೇಯರಾಗುವ ನಾವೆಲ್ಲರೂ, ಅಕ್ಷರಶಃವಾಗಿ 144,000 ಅಲ್ಲ, ನಿತ್ಯತ್ವದಲ್ಲೆಲ್ಲಾ ಪರಲೋಕದ ಮಹಿಮೆಯ ಒಂದು ನಿರೀಕ್ಷೆ ಇರುವುದು. ರಕ್ಷಿಸಲ್ಪಟ್ಟ ಎಲ್ಲರೂ, ಸಭೆಯು (ಎಫೆಸ 5:25-27) ಮತ್ತು ಭೂಲೋಕದ ರಕ್ಷಿಸಲ್ಪಟ್ಟವರು, ನಮ್ಮ ಒಂದೇ ಒಂದು ನಿರೀಕ್ಷೆಯಾಗಿರುವ ಪರಲೋಕದಲ್ಲಿ ನಿತ್ಯಜೀವವನ್ನು ಬಹುಮಾನವಾಗಿ ಹೊಂದುವರು.

---

**ಟಿಪ್ಪಣಿ**

[1]ಪ್ರಕಟನೆ 1:4; 3:21; 4:2-10; 5:1, 6-13; 6:16; 7:9-17; 8:3; 12:5; 14:3; 16:17; 19:4, 5.



© 2009 Truth for Today